

# ಶಾಲ್ಮಲೆ ಶಿವನಾಮ ಹಾಡುವ ಸಹಸ್ರಲಿಂಗ

■ ಕಲಗಾರು ಲಕ್ಷ್ಮೀನಾರಾಯಣ ಹೆಗಡೆ



ಧಾರವಾಡದ ಸೋಮೇಶ್ವರ ಗುಡಿ ಶಾಲ್ಮಲೆಯ ಉಗಮ ಸ್ಥಾನ

**ಶಿರಸಿ–ಯಲ್ಲಾಪುರ ರಸ್ತೆಯಲ್ಲಿ ಹುಳಗೋಳ ಎಂಬ ಪುಟ್ಟ ಹಳ್ಳಿ. ಅಲ್ಲಿಗೆ ಸಮೀಪದ ಶಾಲ್ಮಲಾ ನದಿಯಲ್ಲಿ ರೂಪುಗೊಂಡಿದೆ 'ಸಹಸ್ರಲಿಂಗ'. ಹರಿವ ನದಿಯಲ್ಲಿ ಕಾಣಿಸುವ ಸಹಸ್ರಾರು ಲಿಂಗಗಳಿಗೆ ನದಿಯಲ್ಲಿ ನೀರಿದ್ದಾಗ ಅನುಕ್ಷಣ ಅಭಿಷೇಕ. ಶಿವರಾತ್ರಿ ಸಂದರ್ಭದಲ್ಲಿ ಶಾಲ್ಮಲಿ ದಂಡೆಯಲ್ಲಿ ಜನಸಾಗರ.**

ಶಿವ ಭಾರತೀಯರ ಆರಾಧ್ಯ ದೈವ. ವಿಶ್ವದಾದ್ಯಂತ ಶಿವನ ಆರಾಧನೆ ನಡೆಯುತ್ತದೆ. ಭಾರತದಲ್ಲಂತೂ ಶಿವನ ದೇವಾಲಯವಿಲ್ಲದ ಸ್ಥಳಗಳೇ ಇಲ್ಲ. ದಟ್ಟ ಹಿಮ ಶಿಖರದಿಂದ ಸಮುದ್ರದ ತಟದವರೆಗೂ ಹರಡಿಕೊಂಡಿವೆ ಅಸಂಖ್ಯಾತ ಶಿವಾಲಯಗಳು. ಅವುಗಳಿಗೆ ವೈವಿಧ್ಯಮಯ ಹೆಸರುಗಳು. ಋಷಿಮುನಿಗಳ ಸಾತ್ವಿಕತೆಯ ಪೂಜೆಯಿಂದ ಹಿಡಿದು ಕಾಪಾಲಿಕರ ಕಠೋರ ಆಚರಣೆಯ ಪೂಜೆಗಳು ಯಾವುದೇ ಕಟ್ಟುಪಾಡುಗಳಿಲ್ಲದ, ಜಾತಿ ಧರ್ಮಗಳ ಭೇದವಿಲ್ಲದೆ ನಿತ್ಯಾರಾಧನೆಗಳು ಶಿವನಿಗೆ ಸಲ್ಲುತ್ತವೆ. ಹಾಗಾಗಿ ವೇದಾಂತಿಗಳ ದೃಷ್ಟಿಯಲ್ಲಿ ಇಡೀ ವಿಶ್ವವೇ ಶಿವಮಯ. ತೃಣರೇಣುಗಳಲ್ಲಿಯೂ ಅಡಗಿರುವ ದಿವ್ಯಶಕ್ತಿ, ಮಹಾಶಕ್ತಿ – ಶಿವ.

'ಮಹಾಶಿವರಾತ್ರಿ' ಶಿವನ ಆರಾಧನೆಯ ಪುಣ್ಯಕಾಲ. ವರ್ಷಾವಧಿ ಶಿವನನ್ನು ಪೂಜಿಸಿದರೂ ಶಿವರಾತ್ರಿಯ ಶಿವ ಜಾಗರಣೆಗೆ ಅದರದೇ ಆದ ಪುಣ್ಯ ಪಾಕವಿದೆ. ಶಿವಾನುಗ್ರಹವಿದೆ. ಇದು ನಿರ್ಗುಣ, ನಿರಾಕಾರನಾದ ಶಿವ, ಬ್ರಹ್ಮ–ವಿಷ್ಣುವಿನ ಶ್ರೇಷ್ಠತಾವಾದವನ್ನು ದೂರಮಾಡಲು ಮಾಘ ಕೃಷ್ಣ ಪಕ್ಷದ ಚತುರ್ದಶಿಯ ಮಹಾನಿಶಿ (ಮಧ್ಯರಾತ್ರಿ) ಕಾಲದಲ್ಲಿ ಜ್ಯೋತಿರ್ಲಿಂಗದ ರೂಪದಲ್ಲಿ ಪ್ರಕಟವಾದನು ಎಂದು ನಂಬಲಾಗಿರುವ ಪರ್ವಕಾಲ. ಬೇಡರ ಕಣ್ಣಪ್ಪನಂತಹ ಮುಗ್ಧ ಬೇಡ ತನಗರಿವಿಲ್ಲದೆಯೇ ಈ ಪರ್ವಕಾಲದಲ್ಲಿ ಶಿವಲಿಂಗದ ಮೇಲೆ ಬಿಲ್ವ ಪತ್ರೆ ಹಾಕಿ ಬದುಕನ್ನು ಸಾರ್ಥಕಪಡಿಸಿಕೊಂಡ ಸಹಸ್ರ ಸಹಸ್ರ ಉದಾಹರಣೆಗಳು ಭಾರತೀಯ ಪುರಾಣ ಪ್ರಪಂಚದಲ್ಲಿ ಉಲ್ಲೇಖಿತವಾಗಿವೆ. ಹಾಗಾಗಿ ಶಿವರಾತ್ರಿಯ ಪರ್ವಕಾಲದಲ್ಲಿ ಗುಡಿ ಗೋಪುರ, ನಿತ್ಯ ಪೂಜೆಯ ಯಾವ ಸೌಲಭ್ಯವೂ ಇಲ್ಲದೆ ಅಜ್ಞಾತವಾಗಿ ಕಾಡು ಮೇಡುಗಳ ಗರ್ಭದಲ್ಲಡಗಿದ ಶಿವಲಿಂಗಗಳೂ ಪೂಜೆ ಪಡೆಯುತ್ತವೆ. ಅಂತಹ ಸ್ಥಳಗಳಲ್ಲಿ ಶಾಲ್ಮಲಾ ನದಿ ತಟದ ಸಹಸ್ರಲಿಂಗವೂ ಒಂದು.

## ಎಲ್ಲವೂ ಶಿವಮಯವು

ವೃಕ್ಷ ಸಮೂಹದ ಹಸಿರು ಹೊದ್ದ ಸೃಷ್ಟಿಯ ಸೊಬಗು. ಕಲ್ಲುಗಳ ನಡುವೆ ಹರಿಯುವ ಶುಭ್ರ